Doc-331
T.P-2

(1)

51st Year of Publication ★ SATYAVADI Daily, MYORE 4

Reg No B G-155 6-7-1968

ಪ್ರಮುಖ ಪರ್ಯಟನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available

For Permanent Advertisement

ಸ್ಥಾಪಕರು : ಅರಸುಕಟ್ಟೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾಜ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರಾಜ್ಯದ ಜಿಲ್ಲೆಗಳ ಪುನರ್ವಿಂಗಡನೆಯೆ ?

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ಸೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ಸೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪ್ತರಾ ಟಾಕೇಸಿನವರು, ಪತ್ರಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಯವರು ಶುಭಾಶಯಗಳೊಡನೆ ಸೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳವಾಗಿದ್ದು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಅಷ್ಟಿಷ್ಟಾಸಗಳಿಂದಲೂ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವುದೆಂದು ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಪಶ್ಚಿಮ ಜರ್ಮನಿಯಲ್ಲಿ

ಫ್ರೀಡಮೌಕ್ರಾಟಿಕ್ ಪಾರ್ಟಿಯು, ಮತನೀಡುವ ವಯಸ್ಸನ್ನು 21 ರಿಂದ 18 ಕ್ಕೆ ಇಳಿಸಬೇಕೆಂದು, ಉಮೇದುವಾರರ ಕನಿಷ್ಠ ವಯಸ್ಸನ್ನು 25 ರಿಂದ 23 ಕ್ಕೆ ಇಳಿಸಬೇಕೆಂದೂ ಇಚ್ಛಿಸಿದೆ.

ಕೈಗಾರಿಕಾ ಸಂಘವು ಅಭ್ಯರ್ಥಿ ಫ್ರಿಟ್ಸ್ ಬರ್ಗ್ ಡಾಲರಿನ ಅಪಮೌಲ್ಯ ಅಥವಾ ಕೆಸ ಪುನರ್ಮೌಲ್ಯ ಮಾಡುವ ವಿಷಯದ ಬಗ್ಗೆ ವಿರುದ್ಧಾಭಿಪ್ರಾಯ ಪಟ್ಟಿದ್ದಾರೆ.

ಮಂತ್ರಿಗಳಿಗೆ ಪೌರಸನ್ಮಾನ ಕೊಡಬಾರದು

ಚೇಲೂರನ್ನು ಸಂದರ್ಶಿಸುವ ಕೊಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರಿಗೂ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರಿಗೂ, ಪಿ ಡಬ್ಲ್ಯೂ ಡಿ ಸಂತ್ರಿಯವರಿಗೂ ಅಲ್ಲಿಂದ ನಗರ ಸಭೆಯ ಕಡೆಯಿಂದ ಪೌರ ಸನ್ಮಾನ ಏರ್ಪಡಿಸಬೇಕೆಂದು ಈ ಸಭೆಯಲ್ಲಿ ಬಂದಿದ್ದ ಒಂದು ಸೂಚನೆಯನ್ನು ಕೌನ್ಸಿಲರ್ ಶ್ರೀ ಬಿ ಸಿ ದೇವಪ್ಪನವರು ವಿರೋಧಿಸಿರುವರು. ಆ ಮೂವರೂ ಒಂದು ರಾಜಕೀಯ ಪಕ್ಷವನ್ನು ಪ್ರತಿನಿಧಿಸುತ್ತಾರೆ—ಮುನಿಸಿಪಲ್ ಆಡಳಿತವನ್ನು ಇಷ್ಟಕ್ಕೆ ದ್ವಿವ್ಯಯಿಸಬಾರದು, ಎಂದೂ ಅವರು ಮೇಲಿನ ವಿಷಯವನ್ನು ನಿರ್ಣಯಿಸಲು ಕರೆದಂಥ ವಿಶೇಷ ಸಭೆಯಲ್ಲಿ ತಿಳಿಸಿದರು. ನಗರ ಸಭಾ ಸದಸ್ಯರು ಇಂತಹ ಸನ್ಮಾನ ಕೊಡಲೆ ಬೇಕೆಂದು ಇಚ್ಛಿಸುವದಾದರೆ, ತಾವೇ ಅದರ ಖರ್ಚನ್ನು ವಹಿಸಬಹುದು, ವೈಎಂದೂ ಅವರು ಪತ್ರ ಮುಖೇನ ನಗರ ಸಭೆಗೆ ತಿಳಿಸಿರುತ್ತಾರೆ. ಮಂತ್ರಿಗಳು ಬರೋಣವೂ ಹೆಚ್ಚು, ಇಂಥಾ ಸನ್ಮಾನಗಳೂ ಹೆಚ್ಚು. ಯಾವುದೇ ನಗರ ಸಭೆ ರಾಜ್ಯದ ಮಂತ್ರಿಗಳನ್ನು ಆಹ್ವಾನಿಸಿ ಸನ್ಮಾನಿಸಬೇಕೆಂಬ ನಿಯಮವಿಲ್ಲ. ನಗರಸಭೆ ಸದಸ್ಯರಿಂದಿದ್ದವರಲ್ಲಿ ಕೆಲವರು ತಮ್ಮದೇ ಮಹತ್ವಕೆಗಾಗಿಯೊ, ತಾವು ಪ್ರತಿನಿಧಿಸುವ ಪಕ್ಷದ ಸರಕಾರವು ಅಧಿಕಾರದಲ್ಲಿದ್ದರೆ ಆ ಸರಕಾರದ ಸಚಿವರು ಬಂದಾಗ ಪಕ್ಷಕ್ಕೇ ಹೆಚ್ಚಿ ಬೆಳಕು ಬೀಳಲು ಸಹಾಯವಾಗಲೆಂಬ ಉದ್ದೇಶದಿಂದಲೋ ಈ ಸನ್ಮಾನಸಮಾರಂಭಗಳಿಗೆ ತೊಡುವರು, ಎಂದು ಬಹುಮಂದಿ ನಾಗರೀಕರ ಅಭಿಪ್ರಾಯವಿರುತ್ತದೆ. (ಪ್ರಭಾತ)

ಅಮೇರಿಕಾದಲ್ಲಿ

ಕಾಂಗ್ರೆಸ್ಸಿನಲ್ಲಿ ಈಗ 12 ಮಂದಿ ಮಹಿಳೆಯರಿದ್ದಾರೆ.

13300 ಚಲಚ್ಚಿತ್ರಮಂದಿರಗಳಿವೆ.

ಜಿಲ್ಲಾಧಿಕಾರಿಗಳ ಸಮ್ಮೇಳನ

ಬೆಂಗಳೂರು— ತಾ|| 6 ರಂದು ನಡೆಯಬೇಕಾಗಿದ್ದ ಜಿಲ್ಲಾಧಿಕಾರಿಗಳ ಸಮ್ಮೇಳನವು ತಾ|| 15 ಕ್ಕೆ ಮುಂದೂಡಲಾಗಿದೆ.

★

ಹೌಸಭೆ

ಮೈಸೂರು— ವಿಧಾನಪರಿಷತ್ ಪುತಸಭಾಧಿವೇಶನವು ತಾ || 10 ಬುಧವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆವುದು.

★

ಆಡ್ವೊಕೇಟರ ಸಮ್ಮೇಳನ

ಬೆಂಗಳೂರು— ಕಾನೂನಿನ ಮತ್ತು ಸಾರ್ವಜನಿಕ ವಿಚಾರಗಳನ್ನು ಚರ್ಚಿಸಲು ಅಖಿಲ ಭಾರತ ಆಡ್ವೊಕೇಟುಗಳ ಸಮ್ಮೇಳನವನ್ನು ನಡೆಸಲು ಇಲ್ಲಿನ ಆಡ್ವೊಕೇಟ್ ಸಂಘ ನಿರ್ಧರಿಸಿತು.

★

ರೂ. 135 ಕೋಟಿ ಸಾಲಾ

ನವದೆಹಲಿ— ಭಾರತ ಸರಕಾರವು 1975 ರಲ್ಲಿ ಪುರುಸಾವತಿ ಮಾಡುವ ರೂ. 135 ಕೋಟಿ ಸಾಲಾ ತೆಗೆದುಕೊಳ್ಳುವ ಪ್ರಕಟಣೆ ಹೊರಡಿಸಿದೆ.

★

ಖುಷಾಮತ್ತಿನ ದುಷ್ಕಂಠ

ಮಾನಿಲಾ— ಒಬ್ಬ 8 ವರ್ಷದ ಹುಡುಗ ತನ್ನ ತಾಯಿ ಜೊತೆಯಲ್ಲಿ ತಂದೆ ಆಫೀಸಿಗೆ ಹೋದನು. ಅಲ್ಲಿಯ ಟೇಬಲ್ಲಿನ ಮೇಲೆ ಒಂದು ಬಂದೂಕ ಕಂಡು, ಅದನ್ನು ತೆಗೆದುಕೊಂಡು, ಅಮ್ಮಾ ನನಗೊಂದು ಬಂದೂಕ ಸಿಕ್ಕಿತು ಅಂದನು. ಆಗ ಅಕಸ್ಮಾತ್ತಾಗಿ ಟ್ರಿಗರ್ ಎಳೆಯಲ್ಪಟ್ಟು, ತಾಯಿಗೆ ಗುಂಡು ತಗುಲಿ ಸತ್ತಳು.

★

ಜಿಲ್ಲೆಗಳ ಪುನರ್ವಿಂಗಡನೆ

ಬೆಂಗಳೂರು— ರಾಜ್ಯದ ಈಗಿನ 19 ಜಿಲ್ಲೆಗಳಲ್ಲಿರುವ ಕುಂದುಕೊರತೆ ಸರಿಪಡಿಸಲು ಪುನರ್ವಿಂಗಡನೆ ಮಾಡಬೇಕೆಂಬ ಅಭಿವೃದ್ಧಿ ಹುತ್ತು ಸಹಕಾರ ಮಂತ್ರಿ ಶ್ರೀ ನಾಡಗೌಡರ ಸಲಹೆಯನ್ನು ರಾಜ್ಯದ ಹೊಸ ತನ ಯೋಜನಾ ಮಂಡಲಿ ಪರಿಶೀಲಿಸುವುದೆಂದು ಪ್ರಕಟವಾಗಿದೆ.

★

ಪೋಸಗಾತಿ

ಪೆಳಫೆಲ್ಡ್ (ಸಿಡ್ಜರ್ಲೆಂಡ್)— ಒಬ್ಬ ಇಟಲಿ ಮಹಿಳೆಯು ತಾನು ಯುತಿನಿ ಎಂದು ಹೇಳಿಕೊಂಡು, ಹುಟ್ಟಿದಲ್ಲಿ ಸತ್ತ ನಾವಿಕರ ಮಕ್ಕಳಿಗಾಗಿದೆಂದು 150000 ಡಾಲರು ಕೀಳಿರಿಸಿದಳು. ಪೋಸಕ್ಕಾಗಿ ಅವಳ ಮೇಲೆ ಮೊಖದ್ದಮೆ ಹಾಕಲಾಗಿ, ಅವಳಿಗೆ ಎಕಹೂನವೆ ವರ್ಷ ಸಜೆ ಮತ್ತು 10 ವರ್ಷ ಸ್ವಿಡ್ಜರ್ಲಂಡಿನಿಂದ ಹೊರದೂಡುವ ಆಜ್ಞೆ ನೀಡಲಾಯಿತು.

★

ಎಂ ಪಿ ಸಿ ಸಿ

ಬೆಂಗಳೂರು— ಎಂ ಪಿ ಸಿ ಸಿ ಅಧಿವೇಶನಕ್ಕೆ 6 ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಂದ ಆಹ್ವಾನ ಬಂದಿರುವುದೆಂದೂ, ನಡೆಸುವ ಸ್ಥಳ ಮತ್ತು ತಾರೀಖಿನ ವಿಷಯವು ಕೆಲವು ದಿನಗಳಲ್ಲೇ ನಿರ್ಧರಿಸಲಾಗುವುದೆಂದೂ ಸರಕಾರವಾಗಿದೆ.

★

ಟೆನೀಸ್ ಆಟಿಗಾರನ ಸಂಬಳ

ವೆಂಬಲ್ಡಂ— ಆಸ್ಟ್ರೇಲಿಯಾ ಟೆನಿಸ್ ನಿಪುಣ ರಾಡ್ ಲೇವರ್‌ಗೆ ವರ್ಷಕ್ಕೆ 90008 ಡಾಲರು ಕೊಡುತ್ತಿದ್ದು, ಇನ್ನು ಗೆಲ್ಲುವ ಎಲ್ಲ ಪಂಥಗಳ ಪಾರಿತೋಷಕ ಅವನಿಗೆ ಸೇರುವದೆಂದು ತಿಳಿಸಲಾಗಿದೆ.

★

ಗಮನಾರ್ಹ ವಿಷಯ

ವಂದೇಮಾತರಂ ಎಂಬ ಪದವು ಭಾರತ ಸ್ವಾತಂತ್ರ್ಯ ಸ್ಥಾಪನಾಚಾರ್ಯ ಮಹಾತ್ಮಾ ಗಾಂಧಿಯವರ ಜೀವನದ ಉಸಿರಾಗಿತ್ತು. ಸಾಧನೆಯಲ್ಲಿ ಇವರ " ಈಶ್ವರ ಅಲ್ಲಾ ತೇರೇನಾ ! ಸಬ್‌ಕು ಸನ್ಮತಿ ದೇ ಭಗವಾ " ಎಂಬ ಭಗವಂತನ ಪೂರ್ಣ ನಂಬಿಕೆಯಿಂದ ದೈವಬಲವನ್ನು ಪಡೆದು ಭಾರತವನ್ನು ಸ್ವತಂತ್ರಗೊಳಿಸಿದರು. ಸ್ವತಂತ್ರವಾದಮೇಲೆ ಸರ್ಕಾರಕ್ಕಾಗಲೀ ಪ್ರಜೆಗಳಿಗಾಗಲೀ ದೇವರೇ ಜೇಡಷಾಯಿತು. ಇದು ಪರಪೀಯ ವಿಜ್ಞಾನಾಚರಣೆಯ ಫಲವೆನ್ನಬಹುದು.

ಗಾಂಧಿಯವರು ಯಾವ ದೈವಬಲವನ್ನು ಪಡೆಯಲು ಯಾವ ಸತ್ಯಾಹಾರಿ ಪಾನೀಯವು ಸದ್ವಿದ್ಯೆಯನ್ನು ಸಾಧಿಸಿ ವಿಜಯಶಾಲಿಗಳಾದರೋ ಅದು ಈಗ ಎಲ್ಲರಿಗೂ ಜೀವಿಲ್ಲವಾಗಿದೆ. ಸ್ವಾತಂತ್ರ್ಯ ಸಾಧನೆಯಲ್ಲಿ ಯಾವ ದುರಾಚಾರ ಪಾನೀಯವು ಅಧರ್ಮ ವಿದ್ಯೆಯನ್ನು ಖಂಡಿಸಿದ್ದರೋ, ಅದು ಸರ್ಕಾರಕ್ಕೂ ಪ್ರಜೆಗಳಿಗೂ ಬೇಕಾಗಿದೆ. ಇದರ ಫಲದಿಂದ ಭಾರತಾದ್ಯಂತ ಶಾಂತಿಗೆ ಬದಲು ಕ್ರಾಂತಿ ಹಬ್ಬುತ್ತಾ ಬಲಲಾ ಕಾರಣವಾಯಿತು. ಅವರು ಹಿಂದೂಧರ್ಮದ ಪವಿತ್ರ ಅಡಿಗಲ್ಲಿನ ಮೇಲೆ ರಾಜ್ಯ ಕಟ್ಟಿದರು. ಇಂದು ಈ ಧರ್ಮ ಎಲ್ಲರಿಗೂ ಕಹಿಯಾಗಿ ಪಾಶ್ಚಿಮಾತ್ಯರ ಧರ್ಮ ಬೇಕಾಗಿದೆ. ಗೋಸೇವೆ, ಭೂಸೇವೆ, ದೀನರ ಸೇವೆಗಳೇ ದೇಶಾಭ್ಯುದಯದ ಏಳಿಗೆ ಎಂದು ಶ್ರಮಿಸಿದ ಮಹಾತ್ಮರ ಗುರಿ ಮಾಯವಾಗಿಹೋಯ್ತು. ಗೋಹತ್ಯ, ಪಾಶ್ಚಿಮೋಷ್ಣ, ವಿದೇಶೀವಸ್ತ್ರಗಳ ಬಹಿಷ್ಕಾರ, ಸ್ವದೇಶೀ ಪದಾರ್ಥಗಳಿಗೆ ಸುಂಕ ಹಾಕಬಾರದೆಂದು ಹೋರಾಡಿದ ಮಹಾತ್ಮರ ನಡೆಯೂ ನುಡಿಯೂ ಸ್ವತಂತ್ರವಾದ ಮೇಲೆ ಸರಕಾರಕ್ಕೂ ಪ್ರಜೆಗಳಿಗೂ ಬೇಡವಾಯ್ತು. ಭಾಕಂದಾಯ ಭಾರಿಯಾಯ್ತು, ಬಡವರ ದುಃಖ ಅಧಿಕವಾಯ್ತು.

ನಮ್ಮ ಹಿಂದೂಧರ್ಮ ಪಾಲನೆಯಾದ ಹೊರತು ದೇಶಾಭ್ಯುದಯವಾಗಲಾರದು. ಭಾರತವನ್ನಾಳುವ ಕಾಂಗ್ರೆಸ್ ಸರಕಾರವು ಪೂಜ್ಯ ಗಾಂಧೀಜಿಯವರ ಮಾರ್ಗದಲ್ಲಿ ನಡೆದು, ಗೋಮಾತೆಯ ಗೋಳನ್ನು ನಿವಾರಿಸಿ, ಸದ್ವಿದ್ಯಾ ಪ್ರಭಾವ, ಸಶಾಸ್ತ್ರ ಹಾರ ಪಾನೀಯ ಪ್ರಚಾರವಾಗಿ ಸ್ವರಾಜ್ಯವು ಸುರಾಜ್ಯವಾಗಲೆಂದು ಬಯಸಿ, ಇಂದಿನ ಹತ್ಯಾಕಾಂಡವನ್ನು ಖಂಡಿಸುತ್ತೇನೆ. ಪರಮಾತ್ಮನು ಸರ್ವರಿಗೂ ಸದ್ಬುದ್ಧಿ, ಸತ್ಯ ಶಾಂತಿ, ದಯೆಯನ್ನು ಕೊಟ್ಟು ದೇಶವು ನಿಜವಾದ ರಾಮರಾಜ್ಯವಾಗಲೆಂದು ಕೋರುವೆ

ಬಿ. ಜಿ. ಶಾಸ್ತ್ರಿ, ಆಥರ್ ಮತ್ತು ಅಸ್ಪ್ರಾಲಜರ್
ವಿದ್ಯಾರಣ್ಯಪುರ, ಮೈಸೂರು.



— .... ಸ್ವದೇಶಿ ಧಾನ್ಯದಿಂದ ಅಭಿವೃದ್ಧಿ .... —

Quality Printing — Neat Binding

Lakshminarasimha Press

Sivarampet, Mysore

ಪುಡ್‌ಲಾಂಡ್ ಜನಭರಿತ 2 ನೇ ವಾರ
ಅಮೋಘ ಆರಂಭ -

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಝುಕ್ ಗಯಾ ಆಸಮಾನ್

ಪಾತ್ರ— ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಛೋಪ್ರ, ರಾಜೇಂದ್ರನಾಥ್
ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಅಪೇರ— 5-7-68 ರಿಂದ

ಚಿತ್ತಾಕರ್ಷಕ ಕನ್ನಡ ಚಿತ್ರ

ನಮ್ಮ ಊರು

ಪಾತ್ರ: ಉದಯ ಕುಮಾರ್ ಅಶ್ವಥ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಾಕ್ಕೆ ಜೊಂಬಲ ನೀಡಿ

ಶ್ರೀಶಾಶ್ವತಶ್ರೀ ಜಗದ್ಗುರು ಮಹಾಸಂಸ್ಥಾನಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಿಗಳವರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶುಸಂಗೋಪನೆ, ಕೃಷಿಕಾರ್ಯ, ಪಶುವೈದ್ಯ ಎಂಬೀ ವಿಷಯಗಳ ಏಕೈಕ ಪ್ರಚಾರ ಪತ್ರಿಕೆ : ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಾಕ್ಕೆ ಜೇಬುಸಂಗಳನ್ನೂ ಪ್ರೋತ್ಸಾಹಕ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿಡೆ ಕಳಿಸಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ವಿಷ್ಣು ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1880 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅಸಂತಸಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ ಹೊಂಗಸಂದ್ರ
ಗೋರಕ್ಷಣ ಅಫೀಸು ಸತ್ಯವಾದಿ ಪ್ರೆಸ್, ಚಾಮರಾಜಪುರಂ ಮೈಸೂರು 4

ವಿಳಾಸ— ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Proteet the Cow

★

ಗೋರಕ್ಷಣೆ ಮಾಡಿ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore-4